ನಿಲ್ಲು
ಎಂದರು ಗದರುದನಿಯಲ್ಲಿ;
ಯಾಕೋ ಎಂದರು ಅಮ್ಮನವರು
ಅರ್ಧರ್ಧ ಕಾಲು ಒಂದೊಂದು ಮೆಟ್ಟಿಲ
ಮೇಲೂರಿ ನಿಂತರೂ ನಿಲದವರಂತೆ
ಕೊರಳನು ಗೆರೆ ಮಟ್ಟಿಗೂ ಹೊರಳಿಸದಂತೆ

'ಎಲ್ಲಿಗೆ ಹೋಗಿದ್ದಿರಿ ಬೆಳಬೆಳಿಗ್ಗೆ ಇಬ್ಬರೂ?'
'ಹೋಗಿದ್ದೆವು ಶಿವಲೀಲೆ ನೋಡಿಬರಲು'

ಇಷ್ಟೇ ಮಾತು ನಡೆದಿದ್ದು
ಅಮ್ಮನವರು ನಿಂತೇ ಇದ್ದಾರೆ
ಅರೆನಿಲುವಿನಲ್ಲಿ; ಅಯ್ಯನವರು
ಕಳೆದೇ ಹೋದರು ಯೋಚನೆಯಲ್ಲಿ
ಕೆಳಗೆ ಬಂದಿರುವವಳು ಯಾರಿದ್ದಾಳು?

ಮಧುಗಿರಿಯವಳೋ
ಕೊರಟಗೆರೆಯವಳೋ
ಸಾಸುವೆಕುಂಟೆಯವಳೋ
ಶಿಡ್ಲಘಟ್ಟದವಳೋ
ದಸರೀಘಟ್ಟದವಳೋ
ಮೈಸೂರು ಬೆಟ್ಟದವಳೋ
ಶಿರಸಿಯವಳೋ ಕೊಲ್ಲೂರಿನವಳೋ
ಮದ್ದೂರಿನವಳೋ ಮಲೆಯಾಳದವಳೋ
ಕೊಂಗರವಳೋ ಕನಕದುರ್ಗದವಳೋ
ಯಾರವಳು? ಯಾರವಳು?
ಒದಗಬಹುದೆ ಈ ಚಳಿಗೆ
ಇವರಲ್ಲೊಬ್ಬಳು





ಶಿವ ದೇವರಾದರೂ ಅಷ್ಟೇ
ಹರದೇವರಾದರೂ ಅಷ್ಟೇ
ಅಷ್ಟದಿಕ್ಪಾಲಕರ ಅನುಪಮ
ಸಂತತಿಯಾದರೂ ಅಷ್ಟೇ
ಗಂಡಸು ಜಾತಿ ಗಂಡಸು ಜಾತಿಯೇ
ಮೈಯಾದ ಮೈಯೆಲ್ಲ ಅದೇ ಜೊಲ್ಲುಬುಟ್ಟಿ

ಎಷ್ಟು ಸಲ ತ್ರಿಪುರಸುಂದರಕ್ಕ
ಜನ್ಮವೆತ್ತುವುದು ಈ ಭಂಡಾಸುರ
ರ ಜನ್ಮ ಜಾಲಾಡಲು!

ಅವಳಿಗೂ
ಬೇಸರ ಬಂದು ಬೆರಳ ಸಂದು
ಗಳಿಗೆ ಬಿಟ್ಟುಕೊಂಡಿದ್ದಾಳೆ
ಹಾಳಾಗಿ ಹೋಗಲೆನ್ನುತ್ತ
ಇವುಗಳನ್ನ; ಅಲ್ಲೇ
ಹಲ್ಲು ಕಿರಿಯುತ್ತವೆ
ಥೋ